ನವಸಾಕ್ಷರ ಪುಸ್ತಕ ಮಾಲೆ ೮೨

ತುಷಾರಕುಮಾರ

ಡಾ || ಎಚ್.ಎಸ್. ಶ್ರೀಮತಿ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ - ೮೨

ತುಷಾರ ಕುಮಾರ

ಡಾ. ಎಚ್. ಎಸ್. ಶ್ರೀಮತಿ

ಕನ್ನಡ ವಿಶ್ವವಿದ್ಯಾಲಯ
ಮಾತೆಂಬುದು ಜ್ಯೋತಿರ್ಲಿಂಗ
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೭೭

TUSHARA KUMARA : By Dr. H. S. Srimati. Published by The Director of Prasaranga, Kannada University, Hampi - 583 211, KARNATAKA.
First Impression 1994, Pp. i i + 26, Rs. 8.00.

ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ. ೮.೦೦

ಮುದ್ರಕರು
ಗುರುದತ್ ಪ್ರಿಂಟರ್ಸ್
೯೧, ೪ನೇ ಕ್ರಾಸ್, ೧ನೇ ಮೇನ್
ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಮೈಸೂರು ರಸ್ತೆ
ಬೆಂಗಳೂರು ೫೬೦ ೦೨೬

ತುಷಾರ ಕುಮಾರ

ಸೂರ್ಯನಗರಿ ಎಂಬ ಒಂದು ಊರು. ಅಲ್ಲಿ ಮೂವರು ಅಕ್ಕ ತಂಗಿಯರಿದ್ದರು. ಅವರಿಗೆ ಕನಸು ಕಾಣುವ ವಯಸ್ಸು.

ಒಂದು ಹುಣ್ಣಿಮೆಯ ದಿನ. ಬೆಳದಿಂಗಳು ಹರಡಿದೆ. ಅಕ್ಕತಂಗಿಯರು ಹರಟೆಯ ಹುರುಪಿನಲ್ಲಿದ್ದರು. ಹಿರಿಯವಳೆಂದಳು, "ರಾಜನು ನನ್ನನ್ನು ಅರಮನೆಗೆ ಕರೆದೊಯ್ದರೆ ಒಳ್ಳೆಯ ಅಡುಗೆ ಮಾಡಿ ಅವನನ್ನು ಸಂತೋಷಪಡಿಸುವೆ."

ಎರಡನೆಯವಳೆಂದಳು, "ರಾಜನು ನನ್ನನ್ನೇನಾದರೂ ಅರಮನೆಗೆ ಕರೆದೊಯ್ದರೆ ಚೆಂದದ ಬಟ್ಟೆಗಳನ್ನು ನೇಯ್ದು ಅವನನ್ನು ಮೆಚ್ಚಿಸುವೆ."

ಕಿರಿಯವಳೆಂದಳು, "ರಾಜನೇನಾದರೂ ನನ್ನ ಕೈಹಿಡಿದು ಕರೆದೊಯ್ದರೆ ಮುತ್ತಿನಂಥಾ ಮಗನನ್ನು ಹೆತ್ತು ಕೊಡುವೆ."

ಅವಳ ಮಾತು ಮುಗಿಯುವ ಹೊತ್ತಿಗೆ ಬಾಗಿಲು ಬಡಿದ ಸದ್ದಾಯಿತು. ಬಾಗಿಲು ತೆರೆದರು. ನಂಬಲಾರದ ಸಂಗತಿ! ನಿಜಕ್ಕೂ ರಾಜನೇ ನಿಂತಿದ್ದ. ತಮ್ಮ ಸೂರ್ಯನಗರಿಯ ರಾಜ!

ಅಕ್ಕತಂಗಿಯರ ಮಾತು ಅವನ ಕಿವಿಗೆ ಬಿದ್ದಿತ್ತು. ಕಿರಿಯವಳ ಮಾತು ಅವನ ಮನಸ್ಸನ್ನು ಗೆದ್ದಿತ್ತು. ಕಿರಿಯವಳನ್ನು ಕುರಿತು ಅವನೆಂದ, "ನಾನು ನಿನ್ನನ್ನು ವರಿಸುವೆ! ನನಗೆ ನೀನು ಮಗನನ್ನು ಹೆತ್ತುಕೊಡು."



ರಾಜಕುಮಾರ ಮತ್ತು ಮೂವರು ಯುವತಿಯರ ಮೊದಲ ಭೇಟಿ

ಅಕ್ಕಂದಿರ ಕಡೆಗೆ ತಿರುಗಿ ಹೇಳಿದ "ನಿಮ್ಮ ಬಡತನದ ಬಾಳು ಇಲ್ಲಿಗೆ ಕೊನೆಯಾಗಲಿ. ನೀವೂ ಸಹ ಅರಮನೆಗೆ ಬನ್ನಿ. ಅಡುಗೆ ಹಾಗೂ ನೇಯ್ಗೆಯ ಕೆಲಸ ಮಾಡುತ್ತಾ ನೆಮ್ಮದಿಯಾಗಿರಿ."

ಅಕ್ಕತಂಗಿಯರಿಗೆ ಹಿಡಿಸಲಾರದ ಹಿಗ್ಗು. ರಾಜನೊಂದಿಗೆ ಹೊರಟು ಅರಮನೆ ಸೇರಿದರು.

ಮಗನನ್ನು ಪಡೆಯುವ ಆಸೆ ರಾಜನಿಗೆ. ತಡಮಾಡದೆ ಅಂದೇ ಕಿರಿಯವಳನ್ನು ಮದುವೆಯಾದ. ಅವಳನ್ನು ಪ್ರೀತಿಯಿಂದ ಮಂಜುಮಣಿ ಎಂದು ಕರೆದ.

ತಂಗಿಯು ರಾಣಿಯಾದದ್ದನ್ನು ಕಂಡು ಅಕ್ಕಂದಿರಿಬ್ಬರಿಗೂ ಹೊಟ್ಟೆಯುರಿ. ಅವಳ ಅದೃಷ್ಟವನ್ನು ನೋಡಿ ಸಹಿಸಲಾರದೆ ಹೋದರು. ಆದರೆ ಏನೂ ಮಾಡುವಂತಿರಲಿಲ್ಲ.

ಹೀಗೆಯೇ ದಿನಗಳು ಕಳೆದುವು. ಮಂಜುಮಣಿ ಗರ್ಭ ಧರಿಸಿದಳು. ರಾಜನ ಆನಂದಕ್ಕೆ ಪಾರವಿಲ್ಲ. ಅವಳನ್ನು ಎಲ್ಲೂ ಇಡಲಾರೆನೆಂಬಂತೆ ನೋಡಿಕೊಂಡ.

ಇದೇ ವೇಳೆಗೆ ವೈರಿಗಳು ಸೂರ್ಯನಗರಿಯನ್ನು ಮುತ್ತಿದರು. ನಾಡಿನ ರಕ್ಷಣೆಗೆ ರಾಜನು ಸಿದ್ಧನಾದ.

ಮಂಜುಮಣಿಯನ್ನು ಕರೆದು ಹೇಳಿದ. "ನೋಡು, ನಾನು ಯುದ್ಧಕ್ಕೆ ಹೋಗುತ್ತಿದ್ದೇನೆ. ನಿನ್ನ ಹೊಟ್ಟೆಯಲ್ಲಿ ನನ್ನ ಕುಮಾರನಿದ್ದಾನೆ. ಒಂದಿಷ್ಟೂ ಎಚ್ಚರ ತಪ್ಪದೆ ಆರೋಗ್ಯ ಕಾಪಾಡಿಕೋ. ಯುದ್ಧದಲ್ಲಿ ಜಯಗಳಿಸಿಯೇ ಬರುತ್ತೇನೆ. ಮುತ್ತಿನಂಥಾ ಮಗನೊಂದಿಗೆ ನೀನು ನನ್ನನ್ನು ಎದುರುಗೊಳ್ಳಬೇಕು."

ಮಂಜುಮಣಿ ಸಂತೋಷದಿಂದ ಹೂಂಗುಟ್ಟಿದಳು. ರಾಜ ಯುದ್ಧಭೂಮಿಗೆ ನಡೆದ.

ಮಂಜುಮಣಿಗೆ ದಿನಗಳು ತುಂಬಿದವು. ಮುದ್ದಾದ ಗಂಡುಮಗುವನ್ನು ಹೆತ್ತಳು. ಈ ಸಂತೋಷದ ಸುದ್ದಿಯನ್ನು ರಾಜನಿಗೆ ತಲುಪಿಸಬೇಕೆಂಬ ಆತುರ ಅವಳಿಗೆ.

ನಂಬಿಕೆಯ ಸೇವಕನನ್ನು ಕರೆದು "ರಾಜನಿಗೆ ಸುದ್ದಿ ಮುಟ್ಟಿಸಿ ಬಾ" ಎಂದು ಅಟ್ಟಿದಳು.

ತಂಗಿಯ ಭಾಗ್ಯವನ್ನು ಕಂಡು ಅಕ್ಕಂದಿರು ಕುದಿಯತೊಡಗಿದರು. ಸಂಕಟವನ್ನು ತಾಳಲಾರದೆ ಹೋದರು. ತಂಗಿಗೆ ಕೇಡನ್ನು ಬಯಸಿದರು.

ತಮ್ಮ ಆಳನ್ನು ಕರೆದು "ನೋಡು, ಆ ಕಿರಿಯಳ ಆಳು ರಾಜನಿಗೆ ಸುದ್ದಿ ತಲುಪಿಸಬಾರದು. ಅವನನ್ನು ಅಪಹರಿಸಿ ಸೆರೆಯಲ್ಲಿಟ್ಟುಬಿಡು. ನೀನು ರಾಜನ ಬಳಿಗೆ ಹೋಗು. 'ಕಿರಿರಾಣಿಯ ಹೊಟ್ಟೆಯಲ್ಲಿ ಒಂದು ವಿಚಿತ್ರ ಕೂಸು ಹುಟ್ಟಿದೆ. ಗಂಡೂ ಅಲ್ಲ, ಹೆಣ್ಣೂ ಅಲ್ಲದ ಘೋರ ಕುರೂಪಿ ಕೂಸು. ಇದನ್ನು ತಿಳಿಸಲು ನಮಗೆ ತೀರಾ ದುಃಖವಾಗುತ್ತಿದೆ' ಎಂದು ಹೇಳಿ ನಂಬಿಸು" ಎಂದು ಅಟ್ಟಿದರು.

ಆಳು ಚಾಚೂ ತಪ್ಪದೇ ಅವರು ಹೇಳಿದಂತೆಯೇ ಮಾಡಿದ. ಈ ಕೆಟ್ಟ ಸುದ್ದಿಯನ್ನು ಕೇಳಿ ರಾಜ ಕಂಗಾಲಾದ. ದುಃಖ ತಾಳಲಾರದೆ 'ಈ ಸುದ್ದಿ ತಂದವನನ್ನು ಕೊಂದು ಬಿಡಿ' ಎಂದು ಆಜ್ಞೆ ಮಾಡಿದ.

ಆದರೆ ಮರುಗಳಿಗೆಗೆ ಸ್ವಲ್ಪ ಸಮಾಧಾನ ತಾಳಿದ. ಇದರಲ್ಲಿ ಆಳಿನ ತಪ್ಪೇನೂ ಇಲ್ಲ ಎಂದು ಮರುಗಿದ. ಆಳಿನ ಜೀವ ಉಳಿಸಿದ.

ನಾನು ಬರುವ ತನಕ ಯಾರೂ ದುಡುಕಬೇಡಿ. ಎಂದು ಒಂದು ಪತ್ರದಲ್ಲಿ ಬರೆದು, "ಅರಮನೆಯ ಅಧಿಕಾರಿಗಳಿಗೆ ಇದನ್ನು ಕೊಡು" ಎಂದು ಅಟ್ಟಿದ.

ಆಳು ಹಿಂತಿರುಗಿ ಬಂದ. ಅಕ್ಕಂದಿರು ಅವನನ್ನು ವಿಚಾರಿಸಿ ತನಿಖೆ ಮಾಡಿದರು. ವಿಷಯ ತಿಳಿಯಿತು. ರಾಜನು ಹಿಂತಿರುಗಿ ಬರುವುದಕ್ಕೂ ಮುಂಚೆ ಅವರ ಬೇಳೆ ಬೇಯಿಸಿಕೊಳ್ಳಬೇಕಾಗಿತ್ತಲ್ಲ! ಆಳಿಗೆ ಚೆನ್ನಾಗಿ ಕುಡಿಸಿದರು. ಅವನಿಗೆ ಎಚ್ಚರ ತಪ್ಪುವುದನ್ನೇ ಕಾದರು. ಆಳು ಚೆನ್ನಾಗಿ ಕುಡಿದು ಎಚ್ಚರತಪ್ಪಿ ಬಿದ್ದ. ಅವನ ಅಂಗಿಯ ಕಿಸೆಯಲ್ಲಿದ್ದ



ಅಕ್ಕ ತಂಗಿಯರು ಸೇವಕನಿಗೆ ಪ್ರಜ್ಞೆ ತಪ್ಪಿಸಿ ಪತ್ರವನ್ನು ಕದಿಯುತ್ತಿರುವುದು

ಪತ್ರವನ್ನು ಕದ್ದರು. "ನಾಳೆ ಬೆಳಿಗ್ಗೆಯೇ ಆ ಮಗುವನ್ನೂ, ಅದರ ತಾಯನ್ನೂ ಕಡಲಿಗೆ ತಳ್ಳಿಬಿಡಿ. ಇದು ರಾಜಾಜ್ಞೆ" ಎಂದು ಬೇರೆ ಪತ್ರವನ್ನು ಬರೆದರು. ಆಳಿನ ಕಿಸೆಯಲ್ಲಿ ಇಟ್ಟರು. ಏನೂ ಅರಿಯದವರಂತೆ ಹೊರಟುಹೋದರು.

ಆಳು ಅರಮನೆಗೆ ಬಂದ. ತನ್ನ ಕಿಸೆಯಲ್ಲಿದ್ದ ಪತ್ರವನ್ನು ಅಧಿಕಾರಿಗಳಿಗೆ ಕೊಟ್ಟ. "ರಾಜನೇಕೆ ಹೀಗೆ ಮಾಡಿದ? ಮುದ್ದು ಮಗುವಿಗೂ, ಪಾಪದ ತಾಯಿಗೂ ಇದೇಕೆ ಇಂಥಾ ಶಿಕ್ಷೆ?" ಎಂದು ಅವರು ದುಃಖ ಪಟ್ಟರು.

ಆದರೆ ಮಾಡುವುದೇನು? ರಾಜನ ಆಜ್ಞೆ ಮೀರುವಂತಿಲ್ಲ. ದೊಡ್ಡ ಪೀಪಾಯಿ ತರಿಸಿದರು. ತಾಯಿ ಮಗುವನ್ನು ಅದರಲ್ಲಿ ಕೂರಿಸಿದರು. ತೂತಿಲ್ಲದಂತೆ ಪೀಪಾಯಿಯನ್ನು

ಮುಚ್ಚಿ ಕಡಲಿಗೆ ಎಸೆದು ಬಿಟ್ಟರು. ಪೀಪಾಯಿ ಸೂರ್ಯನಗರಿಯ ದಡಬಿಟ್ಟು ತೇಲುತ್ತಾ ಮುಂದೆ ಹೋಯಿತು.

ಪೀಪಾಯಿಯ ಒಳಗೆ ಕುಳಿತಿದ್ದ ಮಂಜುಮಣಿ ನಿಟ್ಟುಸಿರಿಟ್ಟಳು. "ಅಯ್ಯೋ ದೇವರೇ! ನನ್ನನ್ನೂ ನನ್ನ ಈ ಕಂದನನ್ನೂ ಯಾರು ಕಾಯುವವರು? ಯಾವ ತಪ್ಪನ್ನೂ ಮಾಡದ ನಮಗೇಕೆ ಇಂಥಾ ಶಿಕ್ಷೆ?" ಎಂದು ಗೋಳಾಡಿದಳು.

ಅವಳಿಗೊಂದು ಅಚ್ಚರಿ ಕಾದಿತ್ತು. ಅವಳ ಪುಟ್ಟ ಮಗು ಆ ಒಂದೇ ರಾತ್ರಿಯಲ್ಲಿ ಬೆಳೆದಾ, ಬೆಳೆದಾ. ಬೆಳೆದು ತರುಣ ರಾಜಕುಮಾರನಾಗಿ ಪಕ್ಕದಲ್ಲಿ ಕುಳಿತ. ತಾಯಿಯ ಕಣ್ಣೊರೆಸಿದ. ಎದ್ದು ನಿಂತು ಕಡಲಿಗೆ ನಮಿಸಿದ. ಧೀರ ಗಂಭೀರ ಧ್ವನಿಯಲ್ಲಿ ಹೇಳಿದ:

"ಓ, ಸಾಗರದ ಅಲೆಗಳೇ, ನಿಮ್ಮ ಶಕ್ತಿ ಅಪಾರವಾದದ್ದು. ನೀವು ಅಪ್ಪಳಿಸಿದರೆ ಬೆಟ್ಟಗುಡ್ಡಗಳೂ ಕರಗುವವು. ಹಡಗುಗಳು ಚೂರಾಗುವವು. ನಿಮ್ಮನ್ನು ಎದುರಿಸುವ ಶಕ್ತಿ ನನಗೂ, ನನ್ನ ಈ ಅಮ್ಮನಿಗೂ ಇಲ್ಲ. ನೀವೇ ದಯ ತೋರಬೇಕು. ನಮ್ಮನ್ನು ಕಾಪಾಡಬೇಕು."

ಕಡಲ ಅಲೆಗಳಿಗೆ ಕರುಣೆ ಮೂಡಿತು. ಅವು ಮೃದುವಾದವು. ಪೀಪಾಯಿಯನ್ನು ತೇಲಿಸುತ್ತಾ, ತೇಲಿಸುತ್ತಾ ಮರಳದಂಡೆಗೆ ತಂದವು.

ಸಂದು ಬಿಡದಂತೆ ಪೀಪಾಯಿಯನ್ನು ಮುಚ್ಚಲಾಗಿತ್ತಲ್ಲ. "ಹೇಗಪ್ಪಾ ಇದರ ಮುಚ್ಚಳ ತೆರೆಯುವುದು" ಎಂದು ಒಂದು ಕ್ಷಣ ಯೋಚಿಸಿದ ಮಗ. ಧೈರ್ಯವನ್ನು ತುಂಬಿಕೊಂಡ. ತನ್ನೆಲ್ಲ ಶಕ್ತಿ ಬಿಟ್ಟು ಮುಚ್ಚಳಕ್ಕೆ ತಲೆಯಿಂದ ಗುದ್ದಿದ. ಸ್ವಲ್ಪ ಹೊತ್ತಿನಲ್ಲಿಯೇ ಮುಚ್ಚಳ ಒಡೆಯಿತು. ತಾಯಿ ಮತ್ತು ಮಗ ಹೊರ ಬಂದರು. ತಣ್ಣನೆಯ ಗಾಳಿಗೆ ಮೈಯೊಡ್ಡಿದರು. ನೆಮ್ಮದಿಯ ಉಸಿರು ತೆಗೆದುಕೊಂಡರು.

ಸುತ್ತಲೂ ಅವರು ಕಣ್ಣು ಹಾಯಿಸಿದರು. ಅದೊಂದು ಸುಂದರ ದ್ವೀಪ. ಅಲ್ಲೊಂದು ಗುಡ್ಡ. ಸುತ್ತಲೂ ಬೆಳೆದು ನಿಂತ ಹಲವು ಮರಗಳು.

ಅವರು ಹಸಿದಿದ್ದರು. ದಣಿದಿದ್ದರು. ಮನುಷ್ಯರ ಸುಳಿವಿಲ್ಲ. ಮುಂದೇನು ಎಂದು ಯೋಚಿಸಿದರು. "ಅಮ್ಮ, ಹೆದರಬೇಡ. ಏನಾದರೂ ಬೇಟೆ ಸಿಕ್ಕೀತು. ಮೊದಲು ಹೊಟ್ಟೆಯ ಪಾಡು. ನಂತರ ಮುಂದಿನ ಯೋಚನೆ" ಎಂದ ರಾಜಕುಮಾರ.

ಮರದ ಗೆಲ್ಲೊಂದನ್ನು ಮುರಿದ. ಬಿಲ್ಲುಬಾಣಗಳನ್ನು ತಯಾರಿಸಿದ. ಸುತ್ತಲೂ ನೋಡುತ್ತಾ ನಡೆದ. ಕಡಲ ಕಡೆಯಿಂದ ಒಂದು ಆರ್ತನಾದ ಕೇಳಿಬಂತು. ಸದ್ದು ಬಂದ ಕಡೆಗೆ ತಿರುಗಿದ. ಅಲ್ಲೊಂದು ಕರುಣಾಜನಕ ನೋಟ! ಒಂದು ಹದ್ದು ತನ್ನ ಬಲವಾದ ಕಾಲುಗಳಲ್ಲಿ ಹಂಸವೊಂದನ್ನು ಹಿಡಿದು ಮೇಲೆ ಹಾರಿತ್ತು. ಹಂಸವು ಚೀರಾಡುತ್ತಾ ಬಿಡಿಸಿಕೊಳ್ಳಲು ಒದ್ದಾಡುತ್ತಿತ್ತು. ರಾಜಕುಮಾರನಿಗೆ ಕರುಣೆಯುಕ್ಕಿತು. ತಡಮಾಡದೆ ಬಾಣ ಹೂಡಿದ. ಹದ್ದಿಗೆ ಗುರಿಯಿಟ್ಟು ಹೊಡೆದ. ಬಾಣ ನೇರವಾಗಿ ಹೋಗಿ ಹದ್ದಿಗೆ ನಾಟಿತು. ಹದ್ದು ಬಾಣದ ಸಮೇತ ಕಡಲಿಗೆ ಉರುಳಿತು. ಹಂಸದ ಜೀವ ಉಳಿಯಿತು.

ರಾಜಕುಮಾರ ಹಂಸದ ಬಳಿಗೆ ನಡೆದ. ಮೃದುವಾಗಿ ಕೈಯಲ್ಲಿ ಹಿಡಿದ. ಅವನಿಗೊಂದು ಅಚ್ಚರಿ ಕಾದಿತ್ತು. ಹಂಸವು ಮನುಷ್ಯರಂತೆ ಮಾತಾಡತೊಡಗಿತು.

"ರಾಜಕುಮಾರನೇ, ನೀನು ವೀರನಷ್ಟೇ ಅಲ್ಲ. ಕರುಣಾಮಯಿ ಕೂಡ. ನಿನ್ನಲ್ಲಿದ್ದುದ್ದು ಒಂದೇ ಬಾಣ. ನೀನು ಬಹಳ ಹಸಿದಿರುವೆ. ಬೇಟೆಯನ್ನಾಡಲು ಈ ಬಾಣ ತೀರಾ ಅಗತ್ಯವಿತ್ತು. ಆದರೂ ಅದನ್ನು ಬಳಸಿ ಕರುಣೆಯಿಂದ ನನ್ನನ್ನು ಉಳಿಸಿದೆ. ಮತ್ತೆ ಬಾಣವನ್ನು ತಯಾರಿಸಿ ಬೇಟೆಯಾಡುವವರೆಗೂ ನಿನಗೆ ಉಪವಾಸವಾಯಿತಲ್ಲವೇ? ಇದಕ್ಕಾಗಿ ನನ್ನನ್ನು ಬಯ್ದುಕೊಳ್ಳಬೇಡ. ನೀನು ಮಾಡಿದ ಉಪಕಾರವನ್ನು ನಾನು ಮರೆಯುವುದಿಲ್ಲ. ನನ್ನನ್ನು ನಂಬು. ನೀನು ಉಳಿಸಿದ್ದು ಕೇವಲ ಒಂದು ಹಂಸ ಪಕ್ಷಿಯನ್ನಲ್ಲ. ನಾನು ಹಂಸವತಿ ಎಂಬ ರಾಜಕುಮಾರಿ. ನನ್ನನ್ನು ಹಿಡಿದಿದ್ದ ಹದ್ದು ಒಬ್ಬ ಮಂತ್ರವಾದಿ. ಈಗ ಇಷ್ಟೇ ಹೇಳುವೆ. ಮುಂದೆ ನಿನಗೆ ಒಳ್ಳೆಯದಾಗಲಿದೆ. ನೆಮ್ಮದಿಯಿಂದ ಇರು."

ಹೀಗೆ ಹೇಳಿದ ಹಂಸ ಹಾರುತ್ತಾ ನಿಧಾನವಾಗಿ ಮರೆಯಾಯಿತು.

ಇತ್ತ ಬಳಲಿದ ರಾಜಕುಮಾರ ತಾಯಿಯ ಬಳಿಗೆ ಬಂದ. ಏನು ಮಾಡಬೇಕೆಂದು ತೋಚದಾಯಿತು. ಹಸಿದ ಹೊಟ್ಟೆಯಲ್ಲೇ ಅಲ್ಲೇ ಮರಳಿನ ಮೇಲೆ ಇಬ್ಬರೂ ಮಲಗಿದರು. ಎಷ್ಟೋ ಹೊತ್ತಿನ ಮೇಲೆ ನಿದ್ದೆ ಕವಿಯಿತು.

ಬೆಳಗಾಯಿತು. ತಾಯಿ ಮಕ್ಕಳಿಗೆ ಎಚ್ಚರವಾಯಿತು. ಕಣ್ಣುಜ್ಜಿಕೊಳ್ಳುತ್ತಾ ಎದ್ದು ಕುಳಿತರು. ನಂಬಲಾಗದ ಅಚ್ಚರಿಯ ನೋಟ. ಅವರಿದ್ದ ಜಾಗ ಬಲು ಸುಂದರವಾದ ಒಂದು ನಗರವಾಗಿತ್ತು. ಎದುರಿಗೆ ಚೆಂದದ ಒಂದು ಅರಮನೆ! ಊರಿನ ತುಂಬ ಸಂತೋಷದಿಂದ ನಲಿಯುತ್ತಿರುವ ಜನ! ಅರಮನೆಯಿಂದ ಜನ ಬಂದರು. ತಾಯಿ ಮಗ ಕುಳಿತಲ್ಲಿಗೇ ಬಂದರು. ರಾಜಕುಮಾರನನ್ನು ನೋಡಿದರು.



ರಾಜಕುಮಾರ ಚಂದ್ರನಗರಿಯ ರಾಜನಾದದ್ದು

"ನಾವು ಈ ಚಂದ್ರನಗರಿಯ ಜನರು. ನೀನೇ ನಮ್ಮ ರಾಜ. ನೀವಿಬ್ಬರೂ ಅರಮನೆಗೆ ಬನ್ನಿ." ಎಂದು ಪ್ರೀತಿಯಿಂದ ಕರೆದರು.

ರಾಜಕುಮಾರನಿಗೆ ನಿನ್ನೆ ನಡೆದ ಸಂಗತಿ ನೆನಪಾಯಿತು. ಇದೆಲ್ಲಾ ಆ ಹಂಸವತಿಯ ಕೈವಾಡ ಎಂದು ತಿಳಿಯಿತು.

ಅಮ್ಮನಿಗೆ ನಡೆದದ್ದನ್ನು ತಿಳಿಸಿ ಹೇಳಿದ. ಅಮ್ಮ ತಮ್ಮನ್ನು ಕಾಪಾಡಿದ ದೈವಕ್ಕೆ ನಮಿಸಿದಳು.

ಅವರು ಚಂದ್ರನಗರಿಯ ಅರಮನೆಗೆ ಬಂದರು. ಜನರು ಅವರನ್ನು ಪ್ರೀತಿಯಿಂದ ಮೆರವಣಿಗೆಯಲ್ಲಿ ಕರೆದುಕೊಂಡು ಹೋದರು. ರಾಜಕುಮಾರನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿದರು. ಕಿರೀಟ ತೊಡಿಸಿದರು. ತುಷಾರಕುಮಾರ ಎಂಬ ಹೊಸ ಹೆಸರನ್ನೂ ಇಟ್ಟರು. ಮಂಜುಮಣಿಯ ಮಗನಿಗೆ ಈ ಹೆಸರು ಒಪ್ಪುವಂತೆಯೇ ಇತ್ತು.

ಹೀಗೆ ದಿನಗಳು ಸುಖದಿಂದ ಕಳೆದುವು. ಒಂದು ದಿನ ಚಂದ್ರನಗರಿಯ ದಡಕ್ಕೆ ಎಲ್ಲಿಂದಲೋ ಒಂದು ನೌಕೆ ತೇಲಿಬಂತು. ಆ ನೌಕೆ ವ್ಯಾಪಾರಿಗಳದು. ಎಷ್ಟೋ ಸಲ ಆ ವ್ಯಾಪಾರಿಗಳು ಪ್ರವಾಸ ಮಾಡಿದ್ದವರೇ. ಆದರೆ ಈ ಹೊಸದ್ವೀಪವನ್ನು ಅವರೆಂದೂ ಕಂಡಿರಲಿಲ್ಲ. ಹೀಗಾಗಿ ಕುತೂಹಲದಿಂದ ಈ ಕಡೆಗೆ ಬಂದಿದ್ದರು.

ಅರಮನೆಯ ಕಾವಲುಗಾರರು ನೌಕೆಯನ್ನು ಕಂಡರು. ರಾಜನಿಗೆ ತಿಳಿಸಿದರು. ನಾವಿಕರನ್ನು ಸ್ವಾಗತಿಸಲು ತುಷಾರಕುಮಾರ ತಾನೇ ಖುದ್ದಾಗಿ ಬಂದ.

"ನಾವಿಕರೇ, ನೀವು ಯಾವ ಊರಿನವರು? ವ್ಯಾಪಾರಕ್ಕಾಗಿ ಏನನ್ನು ತಂದಿದ್ದೀರಿ?" ಎಂದೆಲ್ಲಾ ವಿಚಾರಿಸಿದ.

ತುಷಾರಕುಮಾರನ ಮಾತುಗಳಿಂದ ಅವರಿಗೆ ಸಂತೋಷವಾಯಿತು. "ನಾವು ಸೂರ್ಯನಗರಿಯ ವರ್ತಕರು. ಬೆಳ್ಳಿನರಿಗಳ ಉಣ್ಣೆ, ಜಿಂಕೆಗಳ ತೊಗಲುಗಳನ್ನು ತಂದಿದ್ದೇವೆ" ಎಂದರು.

"ಗೆಳೆಯರೇ, ನಿಮ್ಮ ನಾಡಿನೊಂದಿಗೆ ನಮ್ಮ ನಾಡಿನ ಸ್ನೇಹ ಬೆಳೆಯಲಿ. ಸೂರ್ಯನಗರಿಯ ರಾಜನಿಗೆ ಈ ಚಂದ್ರನಗರಿಯ ರಾಜನಾದ ನನ್ನ ವಂದನೆಗಳನ್ನು

ತಿಳಿಸಿರಿ" ಎಂದು ತುಷಾರಕುಮಾರನೂ ಸೌಜನ್ಯದಿಂದ ಹೇಳಿದನು. ಅವರು ಹೇಳಿದ ಸೂರ್ಯನಗರಿ ತನ್ನ ತಂದೆಯ ಊರೇ ಎಂಬುದು ತಿಳಿಯಿತು. ವರ್ತಕರು ಚೆಂದದ ಈ ಚಂದ್ರನಗರಿಯಲ್ಲಿ ಸುತ್ತಾಡಿ ಬಂದರು. ಅಲ್ಲಿನ ಚೆಲುವಿಗೆ ಮರುಳಾದರು. ಸಿಹಿ ನೆನಪುಗಳನ್ನು ಹೊತ್ತು ತಮ್ಮ ಊರಿನತ್ತ ನೌಕೆಯನ್ನು ನಡೆಸಿದರು.

ನೌಕೆಯನ್ನೇ ನೋಡುತ್ತಾ ದಡದಲ್ಲಿ ನಿಂತಿದ್ದ ತುಷಾರಕುಮಾರ. ಅವನ ಮನಸ್ಸಿನ ತುಂಬಾ ಏನೋ ಹೇಳಲಾಗದ ಕಳವಳ. ಕಣ್ಣುತುಂಬಿ ಬಂದಂತಾಯಿತು.



ಹಂಸವತಿ ರಾಜಕುಮಾರನ ದುಃಖಕ್ಕೆ ಕಾರಣವನ್ನು ವಿಚಾರಿಸುತ್ತಿರುವುದು

ಇದ್ದಕ್ಕಿದ್ದಂತೆ ಹಂಸವತಿ ಪ್ರತ್ಯಕ್ಷಳಾದಳು.

"ಹೀಗೇಕೆ ದುಃಖಪಡುವೆ?" ಎಂದು ಕೇಳಿದಳು.

"ಆ ನೌಕೆ ಸೂರ್ಯನಗರಿಗೆ ಹೋಗುತ್ತಿದೆ. ನನ್ನ ತಂದೆಯನ್ನು ಕಾಣಬೇಕೆಂಬ ಹಂಬಲ ನನ್ನನ್ನು ಕಾಡುತ್ತಿದೆ" ಎಂದ ತುಷಾರಕುಮಾರ.

"ಇಷ್ಟಕ್ಕೆ ಅಳುವುದೇಕೆ? ಸೊಳ್ಳೆಯಾಗಿ ನೌಕೆ ಸೇರಿಕೋ" ಎಂದವಳೇ ಎರಡು ಗರಿಗಳನ್ನು ತನ್ನ ರೆಕ್ಕೆಯಿಂದ ಕಿತ್ತಳು. ಕಡಲಿನಲ್ಲಿ ಅದ್ದಿದಳು. ತುಷಾರಕುಮಾರನ ಮೈಮೇಲೆ ನೀರನ್ನು ಸಿಂಪಡಿಸಿದಳು.

ರಾಜಕುಮಾರ ಸೊಳ್ಳೆಯಾಗಿದ್ದ. ಹಾರುತ್ತಾ ಹೋಗಿ ನೌಕೆ ಸೇರಿದ.

ನೌಕೆ ತೇಲುತ್ತಾ ಹೋಯಿತು. ಸೂರ್ಯನಗರಿ ಕಾಣಿಸಿತು. ತನ್ನ ತಂದೆಯನ್ನು ಕಾಣುವ ಕನಸು ನನಸಾಗುತ್ತಿದೆ ಎಂದು ರಾಜಕುಮಾರನಿಗೆ ಸಂತೋಷವಾಯಿತು.

ನೌಕೆಯಿಂದ ಇಳಿದ ವರ್ತಕರು ರಾಜನಿಗೆ ವರದಿ ಒಪ್ಪಿಸಲು ಅರಮನೆಗೆ ನಡೆದರು. ಸೊಳ್ಳೆ ರೂಪದಲ್ಲಿದ್ದ ತುಷಾರಕುಮಾರನೂ ಅವರೊಡನೆ ಅರಮನೆ ತಲುಪಿದ.

ಸಿಂಹಾಸನದಲ್ಲಿ ದೊರೆ ಕುಳಿತಿದ್ದ. ಎಲ್ಲ ವೈಭವಗಳೂ ಇದ್ದವು. ಆದರೂ ಅವನ ಮುಖ ಮಾತ್ರ ಬಾಡಿದಂತೆ ಇತ್ತು.

ಅವನ ಎಡಕ್ಕೆ ಅಡುಗೆಯವಳು, ಬಲಕ್ಕೆ ನೇಯ್ಗೆಯವಳು ಜಂಭದಿಂದ ಕುಳಿತಿದ್ದರು.

ದೊರೆ ರಾಜಸಭೆಯಲ್ಲಿ ನಡೆಯಬೇಕಾದ ಎಲ್ಲ ಕೆಲಸಗಳೂ ನಡೆಯಲೇಬೇಕಲ್ಲ ಎಂದು ಕರ್ತವ್ಯವನ್ನು ಪಾಲಿಸುತ್ತಿದ್ದ. ರಾಜಸಭೆಗೆ ಬಂದ ವರ್ತಕರ ಕ್ಷೇಮ ಕೇಳಿದ.

"ನೀವು ಸುತ್ತಾಡಿ ಬಂದ ಹೊಸ ಸ್ಥಳಗಳನ್ನು ಕುರಿತು ಹೇಳಿರಿ".

"ಪ್ರಭು, ಈ ಬಾರಿಯ ನಮ್ಮ ಯಾನದಲ್ಲಿನ ಅನುಭವ ವಿಶೇಷವಾದುದು. ಈ ಹಿಂದೆ ಎಂದೂ ಕಂಡಿರದ ಹೊಸನಗರಿಯೊಂದನ್ನು ನೋಡಿದೆವು. ಚಂದ್ರನಗರಿ

ಎಂಬ ಹೆಸರು. ಊರು ತುಂಬಾ ಸುಂದರ. ಅಲ್ಲಿನ ದೊರೆ ತುಷಾರಕುಮಾರ. ವೀರನೂ, ದಕ್ಷನೂ ಆಗಿದ್ದಾನೆ. ಅಲ್ಲದೆ ವಿಶೇಷ ಸ್ನೇಹ ಸ್ವಭಾವ ಅವನದು. ನಮ್ಮ ನಾಡಿನ ಬಗ್ಗೆ ಆತ ವಿಚಾರಿಸಿದ. 'ಸೂರ್ಯನಗರಿಯ ದೊರೆಗೆ ನನ್ನ ಪ್ರೇಮದ ವಂದನೆಗಳನ್ನು ತಿಳಿಸಿ' ಎಂದು ವಿಶೇಷವಾಗಿ ಹೇಳಿ ಕಳುಹಿಸಿದ್ದಾನೆ" ಎಂದರು ವರ್ತಕರು.

ಈ ಮಾತುಗಳನ್ನು ಕೇಳುತ್ತಿದ್ದ ರಾಜನಿಗೆ ಏಕೋ ಎದೆ ತುಂಬಿದ ಭಾವ.

"ದೇವರು ನಡೆಸಿದರೆ ಎಂದಾದರೊಮ್ಮೆ ಆ ಅಚ್ಚರಿಯ ನಗರಿಗೆ ಹೋಗಿ ಬರುವೆ, ರಾಜಕುಮಾರನನ್ನು ಕಂಡು ಬರುವೆ" ಎಂದ.

ಅಲ್ಲೆ ಕುಳಿತಿದ್ದ ಅಡಿಗೆಯವಳಿಗೂ, ನೇಯ್ಗೆಯವಳಿಗೂ ಈ ಮಾತು ಸರಿಬರಲಿಲ್ಲ.

"ಯಾವ ಹೊಸ ಗೆಳೆತನದಿಂದ ಎಂತಹ ಪ್ರಭಾವವೋ. ಕಂಡವರಾರು? ರಾಜನು ಈ ಹೊಸನಾಡಿಗೆ ಹೋಗಬಾರದು" ಎಂದು ಯೋಚಿಸಿದರು. ಸಂಚು ಹೂಡಿದರು. ಇಬ್ಬರೂ ಕಣ್ಣಸನ್ನೆ ಮಾಡಿಕೊಂಡರು. ಅಡುಗೆಯವಳೆಂದಳು, "ಅದು ಯಾವ ಮಹಾ ಅಚ್ಚರಿಯ ನಗರಿ? ನಾನು ಒಂದು ನಾಡಿನ ಬಗ್ಗೆ ಕೇಳಿ ಬಲ್ಲೆ. ಅಲ್ಲಿನ ಮರಗಳಲ್ಲಿ ಓಡಿ ನಲಿದಾಡುವ ಒಂದು ಅಳಿಲು ಇದೆಯಂತೆ. ಅದು ಹಾಡುತ್ತಾ ಮರದ ಕಾಯಿಗಳನ್ನು ಸುಲಿದೂ ಸುಲಿದೂ ಕೆಳಗೆ ಹಾಕುತ್ತದಂತೆ. ಆ ಕಾಯಿಗಳು ಸಾಮಾನ್ಯದವಲ್ಲವಂತೆ. ಗಟ್ಟಿ ಚಿನ್ನದ ಚಿಪ್ಪಿನಿಂದಾದವು. ಸುಲಿದ ಕಾಯೊಳಗಂತೂ ಪಚ್ಚೆಗಳು ತುಂಬಿರುತ್ತವಂತೆ. ಇದನ್ನಾದರೆ ಅಚ್ಚರಿ ಎನ್ನಬಹುದು."

ನಿಜಕ್ಕೂ ಈ ಮಾತಿನಿಂದ ರಾಜ ಬೆರಗಾದ. ಅಲ್ಲೇ ಸೊಳ್ಳೆಯಾಗಿ ಸುಳಿದಾಡುತ್ತಿದ್ದ ರಾಜಕುಮಾರನಿಗೆ, ದೊರೆಗೆ ತನ್ನ ಚಂದ್ರನಗರಿಗೆ ಬರುವ ಆಸೆ ಬತ್ತಿಹೋದರೆ ಎನಿಸಿತು. ಅಡುಗೆಯವಳ ಮೇಲೆ ಕೋಪ ಬಂತು. ಹಾರಿ ಹೋಗಿ ಅವಳ ಬಲಗಣ್ಣನ್ನು ಬಲವಾಗಿ ಕಚ್ಚಿತು. ಆ ಕಣ್ಣು ಇಂಗಿ ಹೋಯಿತು. ಅವಳು ಅಳುತ್ತಾ ಹೊರಳುತ್ತಾ ಕೂಗಾಡಿದಳು.

ತನ್ನ ಊರಲ್ಲಿ ಬಂದಿಳಿದ ತುಷಾರಕುಮಾರನಿಗೆ ನೆಮ್ಮದಿ ಇಲ್ಲ. ಪಚ್ಚೆ ತುಂಬಿದ ಚಿನ್ನದ ಕಾಯಿಗಳನ್ನು ಸುಲಿದು ಆಡುವ ಅಳಿಲು ಎಲ್ಲಿದ್ದೀತು ಎಂಬ ಚಿಂತೆ. ದಡದಲ್ಲೇ ನಿಂತಿದ್ದ.

ಹಂಸವತಿ ಪ್ರತ್ಯಕ್ಷವಾದಳು.

"ಅದೆಂಥಾ ಚಿಂತೆ ನಿನಗೆ? ನಿನ್ನ ಮುಖ ಹೀಗೇಕೆ ಬಾಡಿದೆ?"

ತುಷಾರಕುಮಾರನ ಕೈ ಹಿಡಿದು ಪ್ರೀತಿಯಿಂದ ಕೇಳಿದಳು.

"ಇಂಥದೊಂದು ಅಪರೂಪದ ಸಂಗತಿ ಇದೆಯಂತೆ. ನಾನು ಅದನ್ನು ನೋಡದೇ ನಂಬುವುದು ಹೇಗೆ?" ಎಂದು ತಾನು ಸೂರ್ಯನಗರಿಯ ಅರಮನೆಯಲ್ಲಿ ಕೇಳಿದ್ದನ್ನು ಹೇಳಿದ.

"ನೀನು ಕೇಳಿದ ಸಂಗತಿ ಸುಳ್ಳೇನಲ್ಲ. ನೀನು ಅದನ್ನು ಕಾಣಬೇಕೆ? ನಾನು ನೀನಿದ್ದಲ್ಲಿಗೆ ಅದನ್ನು ತಂದು ಕೊಡುವೆ! ಈಗ ಅರಮನೆಗೆ ನಡೆ" ಎಂದಳು ಹಂಸವತಿ.

ರಾಜಕುಮಾರ ಅದೇ ಧ್ಯಾನದಲ್ಲಿ ಅರಮನೆಗೆ ಬಂದ. ಅಂಗಳದಲ್ಲಿ ಅಳಿಲು ಕಂಡಿತು. ಕಣ್ಣನ್ನು ನಂಬದಾದ! ಪಚ್ಚೆ ತುಂಬಿದ ಕಾಯಿಗಳನ್ನು ಸುಲಿದು ಕೆಳಗೆ ಎಸೆಯುತ್ತಾ ಆಡುತ್ತಿರುವ ಅಳಿಲು!

ತಾನು ಕನಸು ಎಂಬಂತೆ ಕಂಡಿದ್ದನ್ನು ನನಸಾಗಿಸಿದ ಹಂಸವತಿಯನ್ನು ನೆನೆದ ತುಷಾರಕುಮಾರ. ಮನದಲ್ಲಿಯೇ ಅವಳಿಗೆ ಒಳ್ಳೆಯದಾಗಲಿ ಎಂದು ಹಾರೈಸಿದ.

ಮುದ್ದು ಅಳಿಲು ಹೊನ್ನಿನ ವೈಭವವನ್ನು ತುಂಬಿ ಪೇರಿಸಿತು. ಈ ವಿಶೇಷದ ಸುದ್ದಿ ದೇಶ ದೇಶಗಳಿಗೆ ಹಬ್ಬಿ ಹರಡಿತು.

ಹೀಗೇ ಇರುವಾಗ ಚಂದ್ರನಗರಿಯ ದಡಕ್ಕೆ ಮತ್ತೆ ಒಂದು ದಿನ ಹೊಸ ನೌಕೆಯೊಂದು ತೇಲಿ ಬಂತು.



ಅಂಗಳದಲ್ಲಿ ಅಳಿಲು ಪಚ್ಚೆ ತುಂಬಿದ ಕಾಯಿಗಳನ್ನು ಸುಲಿಯುತ್ತಿರುವದನ್ನು ರಾಜಕುಮಾರ ವೀಕ್ಷಿಸುತ್ತಿರುವುದು

ವೈಭವ ಬಂತೆಂದು ತುಷಾರಕುಮಾರನು ತನ್ನ ಗುಣವನ್ನೇನೂ ಬದಲಿಸಿರಲಿಲ್ಲ. ಅವನಲ್ಲಿ ಅದೇ ಸ್ನೇಹ, ಅದೇ ಸೌಜನ್ಯ!

ಬಂದ ಅತಿಥಿ ವರ್ತಕರನ್ನು ಸ್ವಾಗತಿಸಲು ತಾನೇ ಖುದ್ದಾಗಿ ಬಂದ. ಅವರ ಕ್ಷೇಮ ವಿಚಾರಿಸಿದ. "ನೌಕಾಯಾನದ ವಿಶೇಷಗಳೇನು?" ಎಂದು ಕುತೂಹಲ ತೋರಿದ.

"ಈ ಬಾರಿ ನಾವು ಕುದುರೆಗಳನ್ನು ವ್ಯಾಪಾರಕ್ಕಾಗಿ ತಂದಿದ್ದೆವು. ನಮ್ಮ ವ್ಯಾಪಾರ ಸುಗಮವಾಗಿ ಮುಗಿಯಿತು. ಸೂರ್ಯನಗರಿ ನಮ್ಮ ನಾಡು. ನಾವು ಅಲ್ಲಿಗೆ ಹಿಂತಿರುಗಿ ಹೊರಟಿದ್ದೇವೆ. ನಿಮ್ಮ ಊರನ್ನು ಕಂಡು ಇಳಿದೆವು" ಎಂದರು.

ಸೂರ್ಯನಗರಿ ಎಂಬ ಹೆಸರು ಕೇಳುತ್ತಲೇ ತುಷಾರಕುಮಾರನ ಮನಸ್ಸು ಕಾತರಗೊಂಡಿತು. ವರ್ತಕರ ಜೊತೆ ಸಾಗರದ ದಡಕ್ಕೆ ಬಂದ.

"ನಿಮ್ಮ ದೊರೆಗೆ ನಮ್ಮ ವಿಶೇಷ ವಂದನೆಗಳನ್ನು ತಿಳಿಸಿ" ಎಂದು ಕೋರಿದ.

ನೌಕೆಗಳು ಹೊರಟವು. ದೂರ ಸಾಗಿದ ಅವುಗಳನ್ನು ನೋಡುತ್ತಾ ತುಷಾರಕುಮಾರನ ಕಣ್ಣುಗಳು ತುಂಬಿ ಬಂದವು.

ಅದಾಗಲೇ ಹಂಸವತಿ ಬಂದು ಅವನ ಕೈ ಹಿಡಿದಳು.

"ಇದೇಕೆ ಈ ದುಃಖ?" ಎಂದಳು.

"ನನ್ನ ತಂದೆಯನ್ನು ಕಾಣುವ ಹಂಬಲ ಮತ್ತೆ ಮೂಡಿ ಬಂದಿದೆ."

"ದುಃಖ ಬೇಡ. ನೋಡೀಗ ನಿನ್ನ ರೂಪ. ಹೋಗಿ ನೌಕೆ ಸೇರಿಕೋ" ಎಂದಳು.

ರಾಜಕುಮಾರ ನೊಣವಾಗಿದ್ದ. ಹಾರಿ ನೌಕೆ ಸೇರಿಕೊಂಡ. ನೌಕೆ ತೇಲುತ್ತಾ ಬಂತು ಸೂರ್ಯನಗರಿಗೆ.

ವರ್ತಕರು ರಾಜನನ್ನು ಕಂಡು ವರದಿಯೊಪ್ಪಿಸಲು ಅರಮನೆಗೆ ನಡೆದರು. ಹಿಂದೆಯೇ ನೊಣವೂ ಹೋಯಿತು.

ವೈಭವದ ಓಲಗದಲ್ಲಿ ರಾಜ ಕುಳಿತಿದ್ದ. ಮುಖದಲ್ಲಿ ಮಾತ್ರ ತುಂಬಿದ ದುಗುಡ. ಒಂದು ಕಣ್ಣು ಕಳೆದುಕೊಂಡಿದ್ದ ಆ ಅಡಿಗೆಯವಳೂ, ಬಿನ್ನಾಣದ ನೇಯ್ಗೆಯವಳೂ ಅಲ್ಲೇ ಕುಳಿತಿದ್ದರು.

ಓಲಗದ ವ್ಯವಹಾರಗಳು ಮುಂದುವರೆಯಲೇಬೇಕಲ್ಲ. ರಾಜನು ಸೌಜನ್ಯದಿಂದ ವರ್ತಕರ ವಿಶೇಷ ಅನುಭವಗಳನ್ನು ಕೇಳತೊಡಗಿದ.

"ಸ್ವಾಮಿ, ನಾವು ನಮ್ಮ ಯಾನದಲ್ಲಿ ಚಂದ್ರನಗರಿ ಎಂಬ ಊರನ್ನು ಕಂಡೆವು. ಅಲ್ಲಿನ ವಿಶೇಷ ವೈಭವವನ್ನು ನೋಡಿದರೆ ಮಾತ್ರವೇ ನಂಬಬಹುದು. ಅಲ್ಲಿನ ಅರಮನೆಯಲ್ಲಿ ಇರುವ ಅಳಿಲಿನ ಪರಿಯನ್ನಂತೂ ನೋಡಿ ನಾವು ನಿಜಕ್ಕೂ ಮೂಕರಾದೆವು. ಪಚ್ಚೆ ತುಂಬಿದ ಕಾಯಿಗಳನ್ನು ಸುಲಿದು ಹಾಕುತ್ತಾ ಹಾಡಿ ನಲಿಯುವ ಅದನ್ನು ಕಾಣಲಾದರೂ ನೀವು ಅಲ್ಲಿಗೆ ಹೋಗಬೇಕು. ಅಲ್ಲಿನ ದೊರೆ ತುಷಾರಕುಮಾರನ ಅತಿಥ್ಯವನ್ನು ನೀವು ಸವಿದೇ ಆನಂದಿಸಬೇಕು" ಎಂದರು.

ರಾಜನಿಗೆ ಏಕೋ ಮತ್ತೆ ಮನಸ್ಸು ತುಂಬಿದ ಭಾವ.

"ದೇವರು ನಡೆಸಿದರೆ, ಒಮ್ಮೆ ಅಲ್ಲಿಗೆ ಹೋಗಿ ಆ ನಾಡನ್ನೂ, ಆ ರಾಜಕುಮಾರನನ್ನೂ ಕಂಡು ಬರುವೆ" ಎಂದ.

ರಾಜನ ಮಾತು ಆ ಅಡುಗೆಯವಳಿಗೂ, ನೇಯ್ಗೆಯವಳಿಗೂ ಮತ್ತೆ ಕಳವಳ ತಂದಿತು. ರಾಜನ ಗಮನ ಯಾವ ಹೊಸ ಸ್ನೇಹದ ಕಡೆಗೂ ಹರಿಯದಿರಲಿ ಎಂದು ಸಂಚು ಹೂಡಿದರು. ಈ ಬಾರಿ ನೇಯ್ಗೆಯವಳು ಕಣ್ಣುಸನ್ನೆ ಮಾಡಿ ಮಾತು ಶುರು ಮಾಡಿದಳು.

"ಈ ವರ್ತಕರ ಅನುಭವ ವಿಶೇಷತೆಯನ್ನು ಅಷ್ಟೇನು ಹೊಗಳುವಿರಿ? ನಾನು ಇದಕ್ಕಿಂತಲೂ ವಿಶೇಷ ಸ್ಥಳದ ಬಗ್ಗೆ ಕೇಳಿಬಲ್ಲೆ. ಅಲ್ಲಿನ ಕಡಲ ದಡದಲ್ಲಿ ಮೂವತ್ತ ಮೂರು ಜನ ವೀರರು ಯಾರೋ ಕೆತ್ತಿಟ್ಟ ವಿಗ್ರಹಗಳಂತೆ ಒಂದೇ ತೆರನಾಗಿದ್ದಾರೆ. ತೀರಾ ಚೆಲುವರಾಗಿದ್ದಾರೆ. ಅವರನ್ನು ಕಾಣುವುದೇ ಒಂದು ಚೆಂದ".

ರಾಜ ಒಂದು ಕ್ಷಣ ಬೆರಗಾದ. ತಂದೆಯು ಚಂದ್ರನಗರಿಗೆ ಬರುವ ಆಸೆಗೆ ಈ ಬಾರಿಯೂ ತೊಂದರೆಯಾಯಿತಲ್ಲ ಎಂದು ನೊಣಕ್ಕೆ ಕೋಪ ಉಕ್ಕಿ ಬಂತು. ರೊಯ್ಯನೆ ಹಾರಿತು. ನೇಯ್ಗೆಯವಳ ಎಡಗಣ್ಣನ್ನು ಇಂಗಿ ಹೋಗುವಷ್ಟು ಬಲವಾಗಿ ಕಚ್ಚಿತು.

ನೇಯ್ಗೆಯವಳು ನೋವಿನಿಂದ ಕಿರುಚಿದಳು. "ಈ ಕೀಟವನ್ನು ಹಿಡಿದು ಕೊಲ್ಲಿ" ಎಂದು ಕೂಗಾಡಿದಳು.

ರಾಜಸಭೆಯಲ್ಲಿ ಗದ್ದಲ. ನೊಣವನ್ನು ಹಿಡಿಯಲು ಗಡಿಬಿಡಿ. ಅವರಿಗೆ ನೊಣ ಸಿಗುವುದಾದರೂ ಹೇಗೆ?

ಅದು ಯಾವುದೋ ಗವಾಕ್ಷಿಯಲ್ಲಿ ತೂರಿ ಚಂದ್ರನಗರಿಯ ಕಡೆಗೆ ಹಾರಿತು. ಹಾರುತ್ತಾ ಬಂದು ರಾಜಕುಮಾರನಾಗಿ ಚಂದ್ರನಗರಿಯ ದಡದಲ್ಲಿ ಇಳಿಯಿತು.

ದಡದಲ್ಲಿ ನಿಂತ ರಾಜಕುಮಾರನಲ್ಲಿ ಮತ್ತೆ ವಿಷಾದ ತುಂಬಿ ಬಂತು. ಸಪ್ಪೆ ಮೋರೆ ಹಾಕಿ ಹಾಗೆಯೇ ನಿಂತಿದ್ದ.

ಹಂಸವತಿ ಮತ್ತೆ ಬಂದು ಮೆಲ್ಲನೆ ಕೈಹಿಡಿದಳು. "ಇದೇನು ಈ ದುಃಖ? ನನಗೆ ಹೇಳಬಾರದೇ?"

ರಾಜಕುಮಾರ ಸೂರ್ಯನಗರಿಯ ರಾಜಸಭೆಯಲ್ಲಿ ತಾನು ಕೇಳಿದ್ದನ್ನು ಹೇಳಿದ. "ಆ ಪಡಿಯಚ್ಚಿನ ವೀರರನ್ನು ನಾನು ಕಾಣಬೇಕಲ್ಲ" ಎಂದ.

"ಓ ಅವರೇ? ಅವರು ನನ್ನ ಸಹೋದರರು. ನೀನು ಅರಮನೆಗೆ ನಡೆ. ಅವರು ನಿನ್ನಲ್ಲಿಗೆ ಬರುವರು" ಎಂದಳು ಹಂಸವತಿ.

ಅರಮನೆಗೆ ನಡೆದ ತುಷಾರಕುಮಾರ. ಅವನನ್ನು ಕಾಣಲು ಪಡಿಯಚ್ಚಿನ ಸೋದರರು ತಮ್ಮ ಹಿರಿಯ ನಾಯಕನೊಂದಿಗೆ ಬಂದರು.

"ರಾಜಕುಮಾರ, ನಿನ್ನ ಈ ಊರಿನ ಕಡಲನ್ನು ಕಾಯುವ ಹೊಣೆ ನಮ್ಮದು. ನಿನ್ನವನಾಗಿ ನಾವು ಕಡಲ ದಡವನ್ನು ಕಾಯುವೆವು. ನೆಮ್ಮದಿಯಿಂದ ಇರು" ಎಂದರು.

ದಿನಗಳು ಕಳೆದವು. ರಾಜಕುಮಾರನಿಗೆ ಮತ್ತೆ ತಂದೆಯನ್ನು ಕಾಣುವ ಹಂಬಲ ಉಂಟಾಯಿತು.

ಹಂಸವತಿ ಮತ್ತೆ ಬಂದಳು. ಅವನ ಕೈಯನ್ನು ಸ್ನೇಹದಿಂದ ಹಿಡಿದಳು.

"ಇದೇಕೆ ಈ ದುಃಖ?" ಎಂದಳು.

ತಂದೆಯನ್ನು ಕಾಣುವ ಹಂಬಲ ಮತ್ತೆ ತಲೆ ಎತ್ತಿದೆ.

"ಹೋಗು ನೌಕೆ ಸೇರಿಕೋ" ಎನ್ನುತ್ತಿದ್ದಂತೆಯೇ ತುಷಾರಕುಮಾರ ಕಣಜದ ರೂಪಧರಿಸಿ ನೌಕೆ ಎಡೆಗೆ ಹಾರುತ್ತಿದ್ದ. ಹಾರುತ್ತಾ ಹೋಗಿ ನೌಕೆ ಸೇರಿಕೊಂಡ.

ನೌಕೆ ಸೂರ್ಯನಗರಿಯನ್ನು ಮುಟ್ಟಿತು. ವರ್ತಕರು ರಾಜನನ್ನು ಕಾಣಲು ಅರಮನೆಗೆ ಹೊರಟರು. ಅವರ ಜೊತೆಯಲ್ಲೇ ಕಣಜ ಕೂಡಾ ಹಾರುತ್ತಾ ರಾಜಸಭೆಯನ್ನು ಸೇರಿತು.

ವೈಭವದ ಓಲಗ ನಡೆದಿದೆ. ರಾಜ ತನ್ನ ಎಲ್ಲ ಕೆಲಸಗಳನ್ನೂ ನಡೆಸುತ್ತಲೇನೋ ಇದ್ದಾನೆ. ಆದರೆ ಅವನ ಮುಖದಲ್ಲಿ ಮಾತ್ರ ವಿವರಿಸಲಾಗದ ನೋವು.

ನೋವನ್ನು ಅಲ್ಲೇ ನುಂಗಿ ವರ್ತಕರೊಂದಿಗೆ ಮಾತು ಬೆಳೆಸಿದ.

"ನಿಮ್ಮ ಯಾನದ ಅನುಭವದ ವಿಶೇಷಗಳನ್ನು ಹೇಳಿರಿ" ಎಂದ.

"ಪ್ರಭೂ, ಹೇಳುವುದೇನು, ಯಾನದಲ್ಲಿ ಚಂದ್ರನಗರಿ ಎಂಬ ಊರೊಂದನ್ನು ಕಂಡೆವು. ಆ ಊರಿನ ವೈಭವವನ್ನು ವಿವರಿಸಲು ಮಾತಿಲ್ಲ. ಅಲ್ಲಿನ ಕಡಲನ್ನು ಕಾಯುವ ಪಡಿಯಚ್ಚಿನ ವೀರರು ಕಣ್ಣ ತುಂಬುವರು. ಅಲ್ಲಿನ ರಾಜ ತುಷಾರಕುಮಾರನೊಂದಿಗೆ ಮಾತುಕತೆ ಎಂದರೆ ಜೀವನದ ಒಂದು ಸೊಗಸು" ಎಂದು ವಿವರಿಸುತ್ತಾ ವರ್ತಕರು ಮೈಮರೆತರು.

ರಾಜನಲ್ಲಿ ಎಂತಹುದೋ ಭಾವ ಕಲಕಿದ ಅನುಭವ.

"ಆಹಾ! ದೇವರು ನಡೆಸಿದರೆ ಒಮ್ಮೆ ಅಲ್ಲಿಗೆ ನಾನು ಹೋಗಿ ಬರಲೇಬೇಕು" ಎಂದು ಉದ್ಗರಿಸಿದ.

ಓಲಗದಲ್ಲಿ ಆ ಅಡುಗೆಯವಳೂ, ಆ ನೇಯ್ಗೆಯವಳೂ ಎಂದಿನಂತೆ ಸಂಚಿನ ಕಣ್ಣುಗಳಿಂದ ನೋಡುತ್ತಾ, ಎಲ್ಲವನ್ನೂ ಕೇಳುತ್ತಾ ಕುಳಿತಿದ್ದರು.

ರಾಜನ ಮಾತು ಕೇಳಿದರು. ಬೆಚ್ಚಿದರು. ರಾಜನ ಗಮನ ಯಾವ ಹೊಸ ಸ್ನೇಹದ ಕಡೆಗೂ ಹರಿಯಬಾರದು ಎಂದು ಹಂಚಿಕೆ ಹೂಡಿದರು.

"ನೀವೀಗ ಕೇಳಿದ್ದರಲ್ಲಿ ಅಂಥಾ ವಿಶೇಷವೇನಿದೆ? ಇದಕ್ಕೂ ಹೆಚ್ಚಿನ ವಿಶೇಷತೆ ಇರುವ ಸ್ಥಳದ ಬಗ್ಗೆ ನಾವು ಕೇಳಿಬಲ್ಲೆವು. ಅಲ್ಲೊಬ್ಬ ದಿವ್ಯ ಸುಂದರಿ ಇದ್ದಾಳೆ. ಅವಳು ಎಷ್ಟು ಸುಂದರಿ ಎಂಬುದನ್ನು ವರ್ಣಿಸಲು ಸಾಧ್ಯವೇ ಇಲ್ಲ. ಅವಳ ಮುಖ ಚಂದ್ರನನ್ನು ನಾಚಿಸುವಂಥ ಬೆಡಗಿನದು. ಅವಳ ಜಡೆಯಲ್ಲಿ ಸೂರ್ಯಚಂದ್ರರು ಆಭರಣಗಳಾಗಿ ಕುಳಿತಿದ್ದಾರೆ. ಅವಳ ಹಣೆಯಲ್ಲಿ ನಕ್ಷತ್ರವೇ ತಿಲಕವಾಗಿ ಕುಳಿತಿದೆ. ಇಡೀ ಲೋಕದಲ್ಲಿ ಅವಳ ದನಿಯ ಇಂಪಿಗೆ ಸಾಟಿಯಾದುದಿಲ್ಲ" ಎಂದು ಒಂದೇ ಉಸಿರಿಗೆ ಬಡಬಡಿಸಿದರು.

ಆ ಕ್ಷಣಕ್ಕೆ ರಾಜ ಬೆರಗಾಗಿ ಹೋದ. ಇದನ್ನೇ ನೋಡುತ್ತಿದ್ದ ಕಣಜರೂಪಿ ರಾಜಕುಮಾರನಿಗೆ ರೇಗಿಹೋಯಿತು. ತನ್ನ ತಂದೆಯಲ್ಲಿ ಚಂದ್ರನಗರಿಗೆ ಬರಬೇಕೆಂಬ ಆಸೆ ಮೂಡಿದ್ದು ಮಾಯವಾಯಿತಲ್ಲಾ ಎಂದು ಆತಂಕವಾಯಿತು. ತಡೆಯಲಾರದ ಕೋಪದಲ್ಲಿ ಹೋಗಿ ಅವರಿಬ್ಬರ ತಲೆ ಕುಕ್ಕಿದ.

ಅಡುಗೆಯವಳೂ, ನೇಯ್ಗೆಯವಳೂ ನೋವಿನಿಂದ ಚೀರಿದರು. ರಾಜಸಭೆಯಲ್ಲಿ ಗದ್ದಲ. ಕಣಜವನ್ನು ಹಿಡಿದು ಕೊಲ್ಲುವ ಗಡಿಬಿಡಿ.

ಕಣಜವೇಕೆ ಅವರಿಗೆ ಸಿಕ್ಕೀತು?

ಯಾವುದೋ ಗವಾಕ್ಷಿಯಲ್ಲಿ ತೂರಿ ಚಂದ್ರನಗರಿಯೆಡೆಗೆ ಹಾರಿತು. ಹಾರುತ್ತಾ ಹಾರುತ್ತಾ ಕಡಲ ತಡಿಯಲ್ಲಿ ಇಳಿದು ರಾಜಕುಮಾರನಾಯಿತು.

ರಾಜಕುಮಾರನ ತುಂಬ ದುಃಖ ತುಂಬಿದೆ. ಕದಲದೆ ಹಾಗೆಯೇ ನಿಂತಿದ್ದ. ಹಂಸವತಿ ಬಂದಳು. ಮೆದುವಾಗಿ ಅವನ ಕೈಹಿಡಿದಳು.

"ಇದೇನು ದುಃಖ?" ಎಂದಳು.

"ಹೀಗೊಬ್ಬಳು ಚೆಲುವೆಯಂತೆ. ನನ್ನಂಥಾ ಯುವಕನಿಗೆ ಇಂಥವಳನ್ನು ಪಡೆಯುವ ಆಸೆ ಬರುವುದು ಸಹಜವಲ್ಲವೇ? ನನಗವಳು ಬೇಕು" ಎಂದ ತುಷಾರಕುಮಾರ.

"ಇದೇಕೋ ಕಷ್ಟಕ್ಕಿಟ್ಟುಕೊಂಡಿತಲ್ಲಾ" ಎಂದಳು ಹಂಸವತಿ.

ರಾಜಕುಮಾರ ಪೆಚ್ಚಾದ.

"ಇಷ್ಟಕ್ಕೆಲ್ಲಾ ಬೇಸರಪಡಬೇಡ. ನಾನು ಅವಳನ್ನು ನಿನಗೆ ಕೊಡಬಲ್ಲೆ. ಆದರೆ ಯೋಚಿಸುವ ವಿಚಾರ ಒಂದಿದೆ ಇದರಲ್ಲಿ."

"ಏನು ಹೇಳು. ನಾನು ಅವಳಿಗಾಗಿ ಏನು ಬೇಕಾದರೂ ಮಾಡಬಲ್ಲೆ."

"ಯೋಚಿಸಿ ನೋಡು. ಅವಳನ್ನು ಮಡದಿಯಾಗಿ ಪಡೆಯುವೆಯಾದರೆ ಆ ಸ್ನೇಹವನ್ನು ಕೊನೆಯವರೆಗೂ ನಡೆಸಬೇಕು. ಇಂದಿನ ಉತ್ಸಾಹದಲ್ಲಿ ಅವಳ ಕೈಹಿಡಿದು ನಂತರ ಕೈಬಿಡುವಂತಿಲ್ಲ" ಎಂದು ಗಂಭೀರಳಾದಳು ಹಂಸವತಿ.

"ಇದರಲ್ಲಿ ಯೋಚಿಸುವುದೇನೂ ಉಳಿದಿಲ್ಲ. ನನ್ನಲ್ಲಿ ಮೂಡಿದ ಒಲವು ಗಟ್ಟಿಯಾದದ್ದು. ಬಂದದ್ದು ಬರಲಿ. ನನಗೆ ಆ ಹೆಣ್ಣು ಮಡದಿಯಾಗಲೇಬೇಕು. ಇದಕ್ಕಾಗಿ ನಾನು ಸಾವನ್ನು ಎದುರಿಸಬೇಕಾಗಿ ಬಂದರೂ ಸಿದ್ಧನಿದ್ದೇನೆ" ತುಷಾರಕುಮಾರನೂ ಅಷ್ಟೇ ಗಂಭೀರವಾಗಿ ಹೇಳಿದ.



ಹಂಸವತಿಯನ್ನು ತುಷಾರ ಕುಮಾರನು ತಾಯಿಯ ಬಳಿಗೆ ಕರೆದುಕೊಂಡು ಬಂದನು

"ಸಾವಿನ ಮಾತೇಕೆ ಆಡುವೆ? ನಾನೇ ಆ ನಿನ್ನ ರಾಜಕುಮಾರಿ. ಇಲ್ಲೇ ಇದ್ದೇನೆ ನೋಡು" ಎನ್ನುತ್ತಾ ಕೈಹಿಡಿದಳು ಹಂಸವತಿ.

ನೋಡನೋಡುತ್ತಿದ್ದಂತೆ ಹಂಸವತಿಯ ರೆಕ್ಕೆಗಳು ಕಳಚಿದವು. ತುಷಾರಕುಮಾರನ ಕನಸಿನ ಚೆಲುವು ಅವನೆದುರು ದಿವ್ಯಸುಂದರಿಯ ರೂಪ ತಾಳಿ ನಿಂತಿತ್ತು.

ತುಷಾರಕುಮಾರ ತುಂಬಿ ಬಂದ ಸಂತಸದಲ್ಲಿ ಮೂಕನಾದ. ಅವಳ ಕೈಯನ್ನು ತನ್ನ ಕೈಯಲ್ಲಿ ಹಿಡಿದ. ತನ್ನ ಈ ಒಲುಮೆಯನ್ನು ತಾಯಿಗೆ ತೋರಿಸಲು ಅರಮನೆಗೆ ನಡೆದ.

ತಾಯಿ ಮಂಜುಮಣಿ ಸೊಸೆಯನ್ನು ಕಂಡು ಮೆಚ್ಚಿದಳು. ಮನಸ್ಸು ತುಂಬಿ ಮಗ ತುಷಾರಕುಮಾರನನ್ನು ಸೊಸೆ ಹಂಸವತಿಯನ್ನೂ ಹರಸಿದಳು.

ದಿನಗಳು ಸಂತೋಷದಲ್ಲಿ ಕಳೆದವು.

ಮತ್ತೊಮ್ಮೆ ಚಂದ್ರನಗರಿಯ ಕಡಲ ತಡಿಯಲ್ಲಿ ಹೊಸ ನೌಕೆಗಳು ಕಾಣಿಸಿದವು. ರಾಜಕುಮಾರ ವರ್ತಕರನ್ನು ಸ್ವಾಗತಿಸಲು ಬಂದ. "ಎಲ್ಲಿಂದ ಬಂದವರು? ವ್ಯಾಪಾರಕ್ಕೆ ಏನು ತಂದಿರುವಿರಿ?" ಎಂದು ವಿಚಾರಿಸಿದ.

"ನಾವು ಸೂರ್ಯನಗರಿಯಿಂದ ಬಂದವರು. ನಮ್ಮ ವ್ಯಾಪಾರ ಮುಗಿಯಿತು. ನಮ್ಮ ನಾಡಿಗೆ ಹಿಂತಿರುಗಿ ಹೊರಟಿದ್ದೇವೆ. ನಿಮ್ಮ ಈ ಚಂದ್ರನಗರಿ ಕಣ್ಣಿಗೆ ಬಿತ್ತು. ಮನಸ್ಸನ್ನು ಸೂರೆಗೊಂಡ ಇದರ ಚೆಲುವನ್ನು ಹತ್ತಿರದಿಂದ ಕಂಡು ಸಂತೋಷಿಸಿದೆವು. ನಾವಿನ್ನು ಬರುವೆವು" ಎಂದರು.

ಸೂರ್ಯನಗರಿ ಎಂಬ ಹೆಸರು ಕೇಳುತ್ತಲೇ ತುಷಾರಕುಮಾರನಲ್ಲಿ ದುಗುಡ ತುಂಬಿತು.

"ನಿಮ್ಮ ದೊರೆಗೆ ನನ್ನ ವಿಶೇಷ ವಂದನೆಗಳನ್ನು ತಿಳಿಸಿರಿ. ನಿಮ್ಮ ದೊರೆ ನಮ್ಮಲ್ಲಿಗೆ ಬರುತ್ತಾನೆಂಬ ಸುದ್ದಿಯನ್ನು ಹಲವಾರು ನಾವಿಕರು ನನಗೆ ಹೇಳಿದ್ದಾರೆ.

ಆದರೆ ಏಕೋ ಇನ್ನೂವರೆಗೆ ಆ ಶುಭಗಳಿಗೆ ಕೂಡಿ ಬಂದಿಲ್ಲ. ನಿಮ್ಮ ರಾಜನ ಬರವಿಗಾಗಿ ನಾನೂ ನನ್ನ ನಾಡಿನವರೂ ಕಾಯುತ್ತಿದ್ದೇವೆ ಎಂದು ದಯವಿಟ್ಟು ತಿಳಿಸಿರಿ" ಎಂದ ತುಷಾರಕುಮಾರ.

ವರ್ತಕರ ನೌಕೆಗಳು ಸೂರ್ಯನಗರಿಯ ಕಡೆಗೆ ಹೊರಟವು. ತುಷಾರಕುಮಾರನ ಮನಸ್ಸೂ ಆ ಕಡೆ ತುಡಿಯಿತು.

ಆದರೆ ಅರಮನೆಯಲ್ಲಿ ತನ್ನ ಬರವನ್ನೇ ಕಾಯುತ್ತಿರುವ ಹಂಸವತಿಯನ್ನು ನೆನೆದ. ಹಿಡಿದ ಕೈ ಬಿಡಲಾರೆ ಎಂದು ಮಾತು ಕೊಟ್ಟಿದ್ದ. ಒಲವಿನ ಮಾತಿಗೆ ಬೆಲೆ ಕಟ್ಟಲಾಗದು. ನಿಧಾನವಾಗಿ ನಡೆದು ಬಂದು ಅರಮನೆ ಸೇರಿದ.

ಇತ್ತ ನೌಕೆಗಳು ಸೂರ್ಯನಗರಿಯನ್ನು ಸೇರಿದವು. ವರ್ತಕರು ರಾಜನನ್ನು ಕಾಣಲು ಅರಮನೆಗೆ ಬಂದರು. ವೈಭವದ ಓಲಗದಲ್ಲಿ ರಾಜ ಕುಳಿತಿದ್ದ. ಅಲ್ಲಿಯೇ ಆ ಅಡುಗೆಯವಳೂ, ನೇಯ್ಗೆಯವಳೂ ಕುಳಿತಿದ್ದರು.

ರಾಜನ ಮುಖದಲ್ಲಿ ಏನೋ ಚಿಂತೆ. ಕಳೆದ ಬಾರಿ ಬಂದಿದ್ದ ವರ್ತಕರ ಮಾತನ್ನೇ ನೆನೆಯುತ್ತಿದ್ದ. ಚಂದ್ರನಗರಿಯ ಸೌಂದರ್ಯ, ತುಷಾರಕುಮಾರನ ಸೌಜನ್ಯ ಕಣ್ಣೆದುರು ತುಂಬಿಕೊಂಡಿತ್ತು. ಏನೇ ಆಗಲಿ, ಸಭೆಯ ಕಲಾಪಗಳು ನಿಲ್ಲುವಂತಿಲ್ಲ. ಬಂದ ವರ್ತಕರ ಕುಶಲವನ್ನು ವಿಚಾರಿಸಿದ. "ನಿಮ್ಮ ಯಾನದ ವಿಶೇಷ ಅನುಭವಗಳನ್ನು ಹೇಳಿ" ಎಂದ.

ವರ್ತಕರ ಮಾತುಗಳಲ್ಲಿ ಚಂದ್ರನಗರಿಯ ಅಚ್ಚರಿಯೇ ತುಂಬಿಕೊಂಡಿತ್ತು.

"ಪ್ರಭು, ಚಂದ್ರನಗರಿಯ ಸೊಬಗನ್ನು ಕಾಣದ ಮೇಲೆ ಕಣ್ಣುಗಳಿದ್ದೂ ಫಲವಿಲ್ಲ. ಅಲ್ಲಿನ ರಾಜಕುಮಾರನ ಸೌಜನ್ಯದ ಸವಿಯನ್ನು ಅನುಭವಿಸದಿದ್ದರೆ ಜನ್ಮವಿದ್ದೂ ಸುಖವಿಲ್ಲ. ಆ ರಾಜಕುಮಾರನಿಗಾದರೋ ನೀವೆಂದರೆ ವಿಶೇಷ ಒಲವು. ನೀವು ಬಂದೇ ಬರುವಿರಿ ಎಂಬ ವಿಶ್ವಾಸದೊಂದಿಗೆ ದಿನನಿತ್ಯ ನಿಮಗಾಗಿ ಎದುರು ನೋಡುತ್ತಿದ್ದಾನೆ. ತಾವು ಖಂಡಿತಾ ಅಲ್ಲಿಗೆ ಹೋಗಿಬರಲೇಬೇಕು" ಎಂದರು.

ರಾಜನ ಮೈಯಲ್ಲಿ ಏನೋ ದಿವ್ಯ ಅನುಭವ ಸಂಚಾರವಾಯಿತು. ಆ ಕೂಡಲೇ ಚಂದ್ರನಗರಿಗೆ ಹೊರಡಬೇಕೆಂದು ಸಿದ್ಧನಾದ.

ಅಡುಗೆಯವಳೂ, ನೇಯ್ಗೆಯವಳೂ ಗಾಬರಿಯಾದರು. ಅವನನ್ನು ಹೇಗಾದರೂ ತಡೆಯಬೇಕೆಂದು ಬಾಯಿ ತೆಗೆದರು.

ಈ ಬಾರಿ ರಾಜನಲ್ಲಿ ಏನೋ ಒತ್ತಡ. ಚಂದ್ರನಗರಿಗೆ ಹೊರಡುವ ಅವನ ಮನಸ್ಸಿಗೆ ಯಾವುದೂ ತಡೆಯಾಗಲಾರದು. ಅವರಿಬ್ಬರನ್ನೂ ಗದರಿಸಿಕೊಂಡ. ಅವನ ಅಬ್ಬರಕ್ಕೆ ಹೆದರಿದ ಅವರು ಬಾಯಿ ಮುಚ್ಚಿಕೊಂಡರು.

ರಾಜನು ಸೀದಾ ಕಡಲಿನ ತಡಿಗೆ ಬಂದ. ನೌಕೆಗಳನ್ನು ಕಡಲಿಗೆ ಇಳಿಸಲು ಹೇಳಿದ. ನೌಕೆಗಳು ತೇಲುತ್ತಾ ತೇಲುತ್ತಾ ಚಂದ್ರನಗರಿಯ ದಡವನ್ನು ಸೇರಿದವು.

ಅರಮನೆಯ ಉಪ್ಪರಿಗೆಯಲ್ಲಿ ನಿಂತಿದ್ದ ತುಷಾರಕುಮಾರ ನೌಕೆಗಳನ್ನು ಕಂಡ. ತನ್ನ ತಂದೆ ಅದರಿಂದ ಇಳಿದು ತನ್ನ ಅರಮನೆಯ ಕಡೆಗೆ ಬರುತ್ತಿರುವುದನ್ನು ನೋಡಿ ಬೆರಗಾದ. ಅಚ್ಚರಿಯಿಂದ ಸಂತೋಷದಿಂದ ನೋಡುತ್ತಲೇ ನಿಂತ.

ಕ್ಷಣವೊಂದರಲ್ಲಿ ಎಚ್ಚರಗೊಂಡ. ಅರಮನೆಯ ಒಳಗೆ ಧಾವಿಸಿ ಹೋದ. ತಾಯಿಯನ್ನೂ ಹೆಂಡತಿಯನ್ನೂ ಕರೆದ.

"ಅಮ್ಮ, ಯಾರು ಬರುತ್ತಿದ್ದಾರೆ ಊಹಿಸು. ನನ್ನ ತಂದೆ, ಸೂರ್ಯನಗರಿಯ ದೊರೆ, ನಮ್ಮ ಮೇಲೆ ಕರುಣೆಯಿಟ್ಟು ಬರುತ್ತಿದ್ದಾರೆ" ಎಂದು ಮೈಯೆಲ್ಲಾ ಸಂತೋಷ ತುಂಬಿ ಹೇಳಿದ. ಅವರೆಲ್ಲ ಕೂಡಿ ಅರಮನೆಯ ಬಾಗಿಲಿಗೆ ಬಂದರು. ಅದೇ ವೇಳೆಗೆ ರಾಜನೂ ಅಲ್ಲಿಗೆ ಬಂದಿದ್ದ.

ಸೂರ್ಯನಗರಿಯ ರಾಜ ಯಾವುದೋ ವಿಶೇಷ ರೀತಿಯ ಚಂದ್ರನಗರಿಯನ್ನು ಕಾಣಲು ಬಂದಿದ್ದ. ಆ ಚಂದ್ರನಗರಿಯ ರಾಜಕುಮಾರನ ಸೌಜನ್ಯದ ಸವಿಯನ್ನು ಅನುಭವಿಸಲು ಬಂದಿದ್ದ.

ಆದರೆ ಅವನೆದುರು ಈಗ ಅವನ ನಿರೀಕ್ಷೆಗೂ ಮೀರಿದ ಸಂತಸದ ಗಳಿಗೆ ಕಾದಿತ್ತು.

ರಾಜಕುಮಾರ ತುಷಾರಕುಮಾರ ತಾಯಿಯ ಕೈಹಿಡಿದು ನಿಂತಿದ್ದ. ಮಂಜುಮಣಿಯನ್ನು ನೋಡುತ್ತಿದ್ದಂತೆ ರಾಜನಿಗೆ ಒಂದು ಕ್ಷಣ ಎಚ್ಚರ ತಪ್ಪುವಂತೆಯೇ ಆಯಿತು.

ಅಡುಗೆಯವಳು ಹಾಗೂ ನೇಯ್ಗೆಯವಳ ಸಂಚಿಗೆ ಬಲಿಯಾಗಿ ಮಂಜುಮಣಿ ಮಗನೊಂದಿಗೆ ಕಡಲಿನ ಪಾಲಾದಳೆಂದೇ ಅವನು ನಂಬಿದ್ದ. ಈ ನಷ್ಟವನ್ನು ತನ್ನ ಜೀವಮಾನದಲ್ಲಿ ಎಂದೂ ತುಂಬಿಕೊಳ್ಳಲಾಗದು ಎಂದು ಇಷ್ಟುದಿನ ನಂಬಿದ್ದ.

ಈಗ ತಾನು ಕಾಣುತ್ತಿರುವುದೇನು? ಇದು ಕನಸಲ್ಲವಷ್ಟೇ?

ಮಗನು ತನ್ನ ಇನ್ನೊಂದು ಕೈಯಿಂದ ತಂದೆಯನ್ನು ಅಪ್ಪಿದ. ತಾಯಿ ತಂದೆಯರು ಒಂದುಗೂಡಿದ್ದನ್ನು ಕಂಡು ಸಂತಸಪಟ್ಟ. ತಂದೆಗೆ ಹಂಸವತಿಯನ್ನು ಪರಿಚಯ ಮಾಡಿಸಿದ. ತನ್ನ ರಾಣಿ ಮಂಜುಮಣಿಯನ್ನು ಪಡೆದ ಸಂತೋಷ ಒಂದು ಕಡೆ. ತನ್ನ ಎದುರು ನಿಂತ ಈ ಸಾಹಸಿ ತರುಣ ತನ್ನ ಮಗನೇ ಎಂಬುದನ್ನು ತಿಳಿದ ಸಂತೋಷ ಒಂದು ಕಡೆ. ಮುತ್ತಿನಂಥಾ ಮಗನನ್ನು ಹೆತ್ತುಕೊಡುತ್ತೇನೆ ಎಂದು ಹೇಳಿದ ಮಂಜುಮಣಿಯ ಮಾತು ಸಾಕಾರವಾಗಿದೆ ಎಂದು ಅವನ ಮನಸ್ಸು ತುಂಬಿ ಬಂತು. ತನ್ನ ಕಾಲಿಗೆ ಬಿದ್ದ ಮಗ ಸೊಸೆಯನ್ನು ಮನತುಂಬಿ ಹರಸಿದ.

ಸಂತೋಷದ ಈ ಸಮಯದಲ್ಲಿಯೂ ಒಂದು ಕ್ಷಣ ಅಡುಗೆಯವಳು ಹಾಗೂ ನೇಯ್ಗೆಯವಳನ್ನು ನೆನೆದು ರಾಜನ ಕೋಪ ಉಕ್ಕಿತು. "ಮಂಜುಮಣಿ, ನಿನಗೆ ಬೇಕಾದಂತೆ ಅವರನ್ನು ಶಿಕ್ಷಿಸು" ಎಂದ.

ಮಂಜುಮಣಿ ಮಾತ್ರ "ಶಿಕ್ಷೆಯ ಮಾತು ಈಗೇಕೆ? ಅವರನ್ನು ಕ್ಷಮಿಸಿ ಬಿಡಿ" ಎಂದಳು.

ಅರಮನೆಯಲ್ಲಿ ಅಂಥವರ ಸಹವಾಸ ಬೇಡ ಎಂದು ರಾಜನು ಅವರಿಬ್ಬರನ್ನೂ "ಎಲ್ಲಾದರೂ ನನ್ನ ಕಣ್ಣಿಗೆ ಕಾಣಿಸದಂತೆ ಹೋಗಿ ಬದುಕಿಕೊಳ್ಳಿ" ಎಂದು ಕಳಿಸಿಬಿಟ್ಟ.

ಅರಮನೆಯಲ್ಲಿ ಸಂತೋಷ ತುಂಬಿ ಹರಡಿತು. ತುಷಾರಕುಮಾರನಿಗೂ ಹಂಸವತಿಗೂ ಮಗಳೊಬ್ಬಳು ಹುಟ್ಟಿದಳು.

ರಾಜ್ಯದ ಎಲ್ಲ ಚಿಂತೆಗಳನ್ನೂ ಮಗನಿಗೆ ವಹಿಸಿದ ರಾಜ ಮಂಜುಮಣಿಯೊಂದಿಗೆ ಮೊಮ್ಮಗಳನ್ನು ಆಡಿಸುತ್ತಾ ಕುಳಿತ.

***

ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ಮಟ್ಟದವರೆಗೆ ಉತ್ತಮ
ಹಾಗೂ ಉಪಯುಕ್ತವಾದ ಪಠ್ಯಪುಸ್ತಕಗಳನ್ನು ನಿರ್ಮಾಣ ಮಾಡುವ ಸಲುವಾಗಿ 'ಪಠ್ಯಪುಸ್ತಕ ರಚನಾ
ವಿಭಾಗ'ವನ್ನು ತೆರೆದಿದ ... ್ಯಪುಸ್ತಕ ರಚನೆ
ಮಾಡಬೇಕೆಂದು ಚಿಂತಿ ... ವಸಾಕ್ಷರರಿಗಾಗಿ
ಪುಸ್ತಕ ಬರೆಸುವ ತಮ ... ಹಿಸಿಕೊಟ್ಟರು.
ವಿಶ್ವವಿದ್ಯಾಲಯವು ಈ ... ಲೇಖಕರನ್ನು,
ಭಾಷಾತಜ್ಞರನ್ನು, ಶಿಕ್ಷಣ ... ಅಭಿಪ್ರಾಯ,
ಸಲಹೆ, ಸಹಕಾರಗಳನ್ನು ... ರ್ಣ ವಿನ್ಯಾಸ,
ಚಿತ್ರಗಳ ಮಹತ್ವ, ಸ ... ಸಲ ಚರ್ಚಿಸಿ
ಯೋಜನೆಯನ್ನು ಅನು ...

ನವಸಾಕ್ಷರರಿಗಾಗಿ ಕ ... ಕಟವಾಗಿರುವ
ಪುಸ್ತಕಗಳನ್ನೆಲ್ಲ ... ಾಷಾತಜ್ಞರಿಂದ
ಪರಿಶೀಲಿಸಲಾಯಿತು. ... ಂಡು ಅವರಿಗೆ
ಕಮ್ಮಟಗಳನ್ನು ನಡೆ ... ಆಯ್ದ ಜಿಲ್ಲೆ,
ತಾಲೂಕುಗಳಿಗೆ ಕಳುಹಿ ... ವರಿಂದ ಅದರ
ಗುಣದೋಷಗಳ ಬಗ್ಗೆ ... ವಿದ್ಯಾಲಯದ
ಗಣಕಯಂತ್ರದಲ್ಲಿ ವಿ ... ಖಕರು ನೀಡಿದ್ದ
ಮಾಹಿತಿಗಳನ್ನೆಲ್ಲ ಮ ... ಾಗಿ ವಿಷಯದ
ಆದ್ಯತೆಗಳನ್ನು ನಿರ್ಧ ... ಖಕರು ನಮ್ಮ
ವಿಶ್ವವಿದ್ಯಾಲಯದ ... ಾಪ ಕೊಟ್ಟರು.
ಕಲಾವಿದರು ವಿಷಯ ... ಹಸ್ತಪ್ರತಿಗಳನ್ನು
ನವಸಾಕ್ಷರರ ಬಳಿ ಕ ... ್ರತಿಕ್ರಿಯೆಗಳನ್ನು
ಅಳವಡಿಸಿ ಹಸ್ತಪ್ರತಿ ...

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು